ಸಿ.ಸಿ.51/2015
ಚಾಸಾ-2, ಪ್ರಾ.ಸಾ.1

ದಿನಾಂಕ 03.03.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ವರುಣ್ ನನ್ನ ಮಗ. ಹೇಮಂತ್ ನನ್ನ ಎರಡನೆಯ ಅಣ್ಣ ಚಾಸಾ-4 ರವರ ಮಗ. ನನ್ನ ತಂದೆಯಾದ ಚಾಸಾ-1 ರವರು ಲಕ್ಷ್ಮೀಶ ನಗರ, ಕಡೂರು ಪಟ್ಟಣದಲ್ಲಿ ವಾಸಕ್ಕೆ ಯೋಗ್ಯವಾದ ಮನೆಗಳು, ಚಿಕ್ಕಬಾಸೂರು ಗ್ರಾಮದಲ್ಲಿ ಜಮೀನು ಮಾಡಿರುತ್ತಾರೆ. ಸದರಿ ಆಸ್ತಿಗಳು ಚಾಸಾ-1 ರವರ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ. ಲಕ್ಷ್ಮೀಶ ನಗರದಲ್ಲಿರುವ ಮನೆಯ ಹಳೆಯ ಅಸೆಸ್ಮೆಂಟ್ ನಂಬರ್.3862/2 ಆಗಿರುತ್ತದೆ. ಪ್ರಸ್ತುತ ಹೊಸ ಅಸೆಸ್ಮೆಂಟ್ ನಂ.2165/2468, 2614/4667 ಆಗಿರುತ್ತದೆ. ಸದರಿ ಮನೆಗಳನ್ನು ಬಾಡಿಗೆಗೆ ಕೊಡಲಾಗಿರುತ್ತದೆ. ಸದರಿ ಮನೆಗಳ ಮೀಟರ್ ಬೋರ್ಡ್ 3488,3489, 3490, 3494 ಸಂಖ್ಯೆಗಳಾಗಿರುತ್ತದೆ. ಎ.ಹೆಚ್.ನಂ.973,974 ಹಾಗೂ 975 ಆಗಿರುತ್ತದೆ. 29676, 29677, ಇನ್ನುಳಿದ ಎರಡು ಮೀಟರ್ ಬೋರ್ಡ್ಗಳ ನಂಬರ್ ಆಗಿರುತ್ತದೆ. ಸದರಿ ಮೀಟರ್ ಬೋರ್ಡ್ಗಳು ಚಾಸಾ-1 ರವರ ಹೆಸರಿನಲ್ಲಿ ಇದ್ದವು. ನನ್ನ ತಂದೆಯ ಸಹಿಯನ್ನು 1 ನೇ ಆರೋಪಿ ಫೋರ್ಜ್ ಮಾಡಿ ಆತನ ಹೆಂಡತಿಯ ಹೆಸರಿಗೆ ಉಮಾದೇವಿ ಅವರ ಹೆಸರಿಗೆ ಮಾಡಿರುತ್ತಾರೆ.

ಕಡೂರು ಟೌನ್ ಕೋ ಆಪರೇಟೀವ್ ಸೊಸೈಟಿಯಲ್ಲಿ ರೂ.1,41,000/- ಗಳಷ್ಟು ಹಣವನ್ನು ನನ್ನ ಸಹಿಯನ್ನು 1 ನೇ ಆರೋಪಿ ಫೋರ್ಜ್ ಮಾಡಿ ಸಾಲ ಪಡೆದಿರುತ್ತಾರೆ. ಚಾಸಾ-1 ರವರು ಈ ಬಗ್ಗೆ ಕೇಳಲು ಹೋದಾಗ ಅವರಿಗೆ ದಿಃ12.05.2015 ರಂದು ಆರೋಪಿತರು ಅವಾಚ್ಯವಾಗಿ ಬೈದು, ಅವರನ್ನು ಹಿಡಿದು ಎಳೆದಾಡಿರುತ್ತಾರೆ. ಆರೋಪಿತರು ಚಾಸಾ-1 ರವರಿಗೆ ನೀವು ಆಸ್ತಿಯನ್ನು ಬೇರೆ ಮಕ್ಕಳಿಗೆ ಕೊಡುತ್ತೀರ ಎಂದು ಅವಮಾನ ಮಾಡಿ ಕಳುಹಿಸಿರುತ್ತಾರೆ. ಲೋನ್ ಮಾಡಿ ಸಾಲ ತೀರಿಸಿಕೊಳ್ಳುತ್ತೇವೆ, ಆಸ್ತಿ ನಮ್ಮ ಹೆಸರಿಗೆ ಬರೆದುಕೊಡು ಎಂದು ಆರೋಪಿತರು ಚಾಸಾ-

ಸಿ.ಸಿ.51/2015
ಚಾಸಾ-2, ಪ್ರಾ.ಸಾ.1

1 ರವರಿಗೆ ಆರೋಪಿತರು ಜೋರು ಮಾಡಿರುತ್ತಾರೆ. ನಂತರ ಚಾಸಾ-1 ರವರು ಎಲ್ಲ ದಾಖಲೆಗಳನ್ನು ಹೊಂದಿಸಿಕೊಂಡು ನನ್ನನ್ನು ಕರೆದು ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಮಾಹಿತಿ ಹಕ್ಕಿನಡಿಯಲ್ಲಿ ದಿಃ11.04.2012 ರಂದು ಚಾಸಾ-1 ರವರು ಕೆ.ಇ.ಬಿ. ಗೆ ದಾಖಲೆ ಕೊಡಿ ಎಂದು ಕೇಳಿದ್ದು, ದಿಃ07.05.2012 ರಂದು ದಾಖಲೆ ನೀಡಿದ್ದು, ಸದರಿ ಎಲ್ಲಾ ದಾಖಲೆಗಳನ್ನು ಚಾಸಾ-1 ರವರು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನನ್ನ ಇನ್ನೊಬ್ಬ ಅಣ್ಣನ ಜೊತೆಗೆ ಸೇರಿಕೊಂಡು ಕೇಸು ದಾಖಲು ಮಾಡಿರುತ್ತೇವೆ.

**ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು